ಅ) ವೀರಾಜಪೇಟೆ (ಪಾರಾಣೆ) ಗ್ರಾಮಕ್ಕೆ ಹೋಮಿಯೋಪತಿ ಆಸ್ಪತ್ರೆಯನ್ನು ಮಂಜೂರು ಮಾಡಲಾಗಿದೆಯೇ ? ಹಾಗಿದ್ದಲ್ಲಿ ಅದನ್ನು ಯಾವಾಗ ಮಾಡಲಾಯಿತು ?

ಆ) ಆಸ್ಪತ್ರೆಯನ್ನು ಇನ್ನೂ ಪ್ರಾರಂಭಿಸದೇ ಇರಲು ಕಾರಣವೇನು ?

ಇ) ಇದನ್ನು ಯಾವಾಗ ಪ್ರಾರಂಭಿಸಲಾಗುತ್ತದೆ ? ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು

ಡಾ।। ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ಹೌದು. ಜೂನ್ ೧೯೮೪ರಲ್ಲಿ ಮಂಜೂರು ಮಾಡಲಾಯಿತು.

ಆ) ವೈದ್ಯರ ನೇಮಕಾತಿಯಲ್ಲಿ ವಿಳಂಬವಾಗಿರುವುದರಿಂದ

ಇ) ಆದಷ್ಟು ಬೇಗ ಇದನ್ನು ಪ್ರಾರಂಭಿಸಲಾಗುವುದು, ಅದಕ್ಕೆ ತಗಲುವ ಅಂದಾಜು ವೆಚ್ಚ ೫೫,೨೮೬ ರೂಪಾಯಿಗಳು

ಅಲ್ಪಸಂಖ್ಯಾತ ವರ್ಗದವರಿಗೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ಕೊಡುವುದನ್ನು ನಿರಾಕರಿಸಿರುವುದು

೧೫೧ (೩೧೬) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯೋತ್ಸವ ಮತ್ತು ರಾಜ್ಯ ಪ್ರಶಸ್ತಿ ನೀಡುವಲ್ಲಿ ಅಲ್ಪಸಂಖ್ಯಾತ ಕೋಮಿನವರನ್ನು ನಿರ್ಲಕ್ಷ್ಯ ಮಾಡಿರುವುದಕ್ಕೆ ಕಾರಣವೇನು ?

ಡಾ।। ಜೀವರಾಜ ಆಳ್ವ (ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಖಾತೆಯ ರಾಜ್ಯ ಸಚಿವರು).—

ಅ) ರಾಜ್ಯೋತ್ಸವದ ರಾಜ್ಯ ಪ್ರಶಸ್ತಿ ನೀಡುವಲ್ಲಿ ಅಲ್ಪಸಂಖ್ಯಾತ ಕೋಮಿನವರನ್ನು ನಿರ್ಲಕ್ಷ್ಯ ಮಾಡಲಾಗಿಲ್ಲ.

ಆರಕ್ಷಕ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

೧೫೨ (೬೮೫) ಶ್ರೀ ರಮೇಶ್ ಕುಮಾರ್ (ಶ್ರೀನಿವಾಸಪುರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿರುವ ಆರಕ್ಷಕ ಮಹಾ ನಿರ್ದೇಶಕರು, ವಿಶೇಷ ಆರಕ್ಷಕ ಮಹಾ ನಿರೀಕ್ಷಕರು, ಆರಕ್ಷಕ ಉಪ ಮಹಾನಿರೀಕ್ಷಕರು, ಆರಕ್ಷಕ ಅಧೀಕ್ಷಕರು ಮತ್ತು ಆರಕ್ಷಕ ಉಪ ಅಧೀಕ್ಷಕರು ಹಾಗೂ ಪೋಲೀಸ್ ದಳದ ಬಲ ಮತ್ತು ಆರಕ್ಷಕ ಉಪ ನಿರೀಕ್ಷಕರ ಒಟ್ಟು ಸಂಖ್ಯೆ (ಈ ತಹಲ್‌ವರೆಗಿನ ಅಂಕಿ ಗಳನ್ನು ಒದಗಿಸುವುದು)

ಆ) ಯಾವ ಆಧಾರದ ಮೇಲೆ ಮೇಲ್ಕಂಡ ಹುದ್ದೆಗಳನ್ನು ನಿಗದಿಪಡಿಸಲಾಗಿದೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಈ ಕೆಳಕಂಡಂತಿವೆ :

೧ ಆರಕ್ಷಕ ಮಹಾನಿರ್ದೇಶಕರು	೩
೨ ವಿಶೇಷ ಆರಕ್ಷಕ ಮಹಾನಿರೀಕ್ಷಕರು	೭
೩ ಆರಕ್ಷಕ ಉಪ ಮಹಾನಿರೀಕ್ಷಕರು (ವ್ಯಾಸಂಗದ ರಜೆಯ ಮೇಲೆ ಇರುವ ಒಬ್ಬರೂ ಸೇರಿ)	೨೭
೪ ಆರಕ್ಷಕ ಅಧೀಕ್ಷಕರು (ಐ.ಪಿ.ಎಸ್) (ವ್ಯಾಸಂಗದ ರಜೆಯ ಮೇಲೆ ಇರುವ ಇಬ್ಬರೂ ಸೇರಿ)	೪೮